# ಜರಾ ನೋಡಿ, ಜಾರಾ ಹಾರಾಟ!



■ ಪ್ರವೀಣ ಕುಲಕರ್ಣಿ

ಬೆಲ್ಜಿಯಂನ ಕಾಟ್ರಿಜಕ್ ಎಂಬ ನಗರದಿಂದ ಕಳೆದ ವಾರ ಆ ಪುಟ್ಟ ವಿಮಾನ ಹಾರಲು ಸಿದ್ಧವಾಗಿ ನಿಂತಾಗ ನಗರದ ಮೇಯರ್, ಪತ್ರಕರ್ತರು, ನಾಗರಿಕರು 'ಬೈ' ಹೇಳಲು ದೊಡ್ಡ ಸಂಖ್ಯೆಯಲ್ಲಿ ವಿಮಾನ ನಿಲ್ದಾಣದಲ್ಲಿ ಜಮಾಯಿಸಿದ್ದರು. ಏಕೆಂದರೆ, ಆ ವಿಮಾನ ತುಂಬಾ ವಿಶಿಷ್ಟವಾದ ಪ್ರಯಾಣಕ್ಕೆ ಸಜ್ಜಾಗಿ ನಿಂತಿತ್ತು. ಅದರ ಪೈಲಟ್ ಜಾರಾ ರುದರ್‌ಫೋರ್ಡ್ ಇನ್ನೂ ಹದಿಹರೆಯದ ಹುಡುಗಿ. ಐದು ಖಂಡಗಳ, 52 ದೇಶಗಳನ್ನು ಸುತ್ತಲು 'ಸೋಲೊ (ಏಕಾಂಗಿ) ವಿಮಾನಯಾನ'ಕ್ಕೆ ಹೊರಟ ಖುಷಿಯಲ್ಲಿ ಅವಳಿದ್ದಳು!

ಜಾರಾ, ತುಂಬಾ ಹಗುರವಾದ 'ಸ್ಪೋರ್ಟ್ಸ್ ಪ್ಲೇನ್' ಬೆನ್ನೇರಿ ಜಗತ್ತನ್ನು ಸುತ್ತಲು ಹೊರಟಿದ್ದಾಳೆ. 'ಸೋಲೊ ಯಾನದ ಮೂಲಕ ಭೂಮಿಯನ್ನು ಸುತ್ತು ಹಾಕುವುದು ನನ್ನ ಗುರಿ. ಒಂದಿಲ್ಲೊಂದು ದಿನ ಗಗನಯಾತ್ರಿಯಾಗುವ ಕನಸು ಕೂಡ ಇದೆ' ಎಂದು ಅವಳು ಹೇಳುತ್ತಾಳೆ. ತವರಿನಿಂದ ಹೊರಟ ಜಾರಾ ಮೊದಲು ಭೇಟಿ ನೀಡಿದ ದೇಶ ಇಂಗ್ಲೆಂಡ್. ಅಲ್ಲಿಂದ ಮೂರು ತಿಂಗಳವರೆಗೆ ಹಲವು ದೇಶಗಳ ಸುತ್ತಾಟ. ಸಾಗರಗಳು, ಮರುಭೂಮಿಗಳು, ಕಾಡುಗಳನ್ನೆಲ್ಲ ದಾಟುತ್ತಾ ದೇಶದಿಂದ ದೇಶಕ್ಕೆ ಹಾರುತ್ತಾ 'ಸೋಲೊ' ಯಾನದ ಸೊಬಗನ್ನು ಸವಿಯುವುದು ಅವಳ ಹಿರಿದಾದ ಆಸೆ.

ಸಂಚಾರದಟ್ಟಣೆಯ ವಾಯುಮಾರ್ಗದಿಂದ ದೂರವಿದ್ದು, ಪುಟ್ಟ ಪುಟ್ಟ ವಿಮಾನ ನಿಲ್ದಾಣಗಳಿಗೆ ಭೇಟಿ ಕೊಡುವುದು ಅವಳ ಗುರಿ. ಆದ್ದರಿಂದಲೇ ನ್ಯೂಯಾರ್ಕ್‌ನ 'ಜೆಎಫ್‌ಕೆ' ವಿಮಾನ ನಿಲ್ದಾಣದಂತಹ ಸದಾ ಗಿಜಿಗುಡುವ ನಿಲ್ದಾಣಗಳ ಗೋಜಿಗೆ ಹೋಗದಿರಲು ಅವಳು ನಿರ್ಧರಿಸಿದ್ದಾಳೆ. ರಾತ್ರಿ ತಂಗಲು, ಇಂಧನ ತುಂಬಿಸಿಕೊಳ್ಳಲು ಸಣ್ಣ ವಿಮಾನ ನಿಲ್ದಾಣಗಳೇ ಉತ್ತಮ ಎಂದು ಆಕೆ ಹೇಳುತ್ತಾಳೆ.

ಒಮ್ಮೆ ಟೇಕ್ ಆಫ್ ಆದಮೇಲೆ 5–6 ಗಂಟೆಗಳ ನಿರಂತರ ಯಾತ್ರೆ ಮಾಡುವುದು, ಬಳಿಕ ಹತ್ತಿರದ ನಿಲ್ದಾಣದಲ್ಲಿ ಲ್ಯಾಂಡ್ ಆಗುವುದು ಅವಳ ಯಾನದ ಯೋಜನೆ. ಯಾವೆಲ್ಲ ದೇಶಗಳಿಗೆ ಭೇಟಿ ನೀಡಬೇಕೋ ಆ ಎಲ್ಲ ದೇಶಗಳಿಂದ ಅವಳು ಈಗಾಗಲೇ ಅನುಮತಿಯನ್ನೂ ಪಡೆದಿದ್ದಾಳೆ. ಅವಳು ಭೇಟಿ ನೀಡುವ ದೇಶಗಳ ಪಟ್ಟಿಯಲ್ಲಿ ಸೌದಿ ಅರೇಬಿಯಾ, ಮ್ಯಾನ್ಮಾರ್ ಸಹ ಇವೆ.

'ಯುವತಿಯರಲ್ಲೂ ಸಾಹಸ ಮನೋಭಾವ ಇರಬೇಕು' ಎಂದೆನ್ನುವ ಜಾರಾ, 'ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹಿಳೆಯರು ಇನ್ನಷ್ಟು ಮಿಂಚಬೇಕು. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಹುಡುಗಿಯರು ಹೆಚ್ಚು, ಹೆಚ್ಚಾಗಿ ಸೇರಿಕೊಳ್ಳಬೇಕು. ಆದರೆ, ದುರದೃಷ್ಟವಶಾತ್ ಈ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಅಷ್ಟಾಗಿಲ್ಲ. ಇದು ಬದಲಾಗಬೇಕು' ಎಂದು ಆಶಿಸುತ್ತಾಳೆ.

ಆಯಾ ದೇಶದಲ್ಲಿ ವಿಮಾನ ನಿಲ್ದಾಣಗಳ ವಾಯುಸಂಚಾರ ನಿಯಂತ್ರಕರ ಜತೆ ಸಂಪರ್ಕ ಸಾಧಿಸಲು ಜಾರಾ ಬಳಿ ಸೆಟಲೈಟ್ ಟೆಲಿಫೋನ್ ಮತ್ತು ರೇಡಿಯೊ ಇವೆ. ಕಾಕ್‌ಪಿಟ್‌ನಲ್ಲಿ ಬೇರೇನಿದೆ ಎಂದು ಕೇಳಿದರೆ, 'ಸಂಗೀತ ಸಾಧನಗಳಿವೆ, ಪಾಡ್‌ಕಾಸ್ಟ್ ಮಾಡಲು ಬೇಕಾದ ಸಲಕರಣೆಗಳೂ ಇವೆ' ಎಂದು ಉತ್ತರಿಸುತ್ತಾಳೆ.

ಜಾರಾಳ ಸೋಲೊ ಯಾನಕ್ಕೆ ಅಗತ್ಯ ಬೆಂಬಲ ನೀಡಲು ಅವಳ ವಿಮಾನದ ಜತೆಗೆ ಬೇರೆ ಯಾವುದೇ ವಿಮಾನ ಹೋಗುತ್ತಿಲ್ಲ. ಆದರೆ, ಬ್ರಿಟಿಷ್ ವಾಯುಸೇನೆಯ ಮಾಜಿ ಪೈಲಟ್ ಆಗಿರುವ ಜಾರಾಳ ತಂದೆ, ಅವಳ ಸುರಕ್ಷಿತ ಯಾನಕ್ಕೆ ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದಾರೆ. ಆಯಾ ದೇಶಗಳ ವಾಯುಪ್ರದೇಶ ಪ್ರವೇಶಿಸಲು ಅನುಮತಿಯನ್ನೂ ಕೊಡಿಸಿದ್ದಾರೆ. ಅಟ್ಲಾಂಟಿಕ್ ಸಾಗರವನ್ನು ದಾಟುವುದು ಅವಳ ಮುಂದಿರುವ ಮೊದಲ ಸವಾಲು. ಸೈಬೇರಿಯಾದಿಂದ ಮಂಗೋಲಿಯಾವರೆಗೆ ಕ್ರಮಿಸುವುದು ಕೂಡ ಅವಳಿಗೆ ಕಷ್ಟದ ಹಾದಿ. ಎಲ್ಲಿಯಾದರೂ ತೊಂದರೆಗೆ ಸಿಲುಕಿದರೆ ಈ ಪ್ರದೇಶದಲ್ಲಿ ಹತ್ತಿರದಲ್ಲಿ ಜನವಸತಿಯೇ ಇಲ್ಲ.

'ಸವಾಲುಗಳನ್ನು ನೆನಪಿಸಿಕೊಂಡಾಗ ಒಮ್ಮೊಮ್ಮೆ ಆತಂಕವಾಗುವುದು ನಿಜ. ಕೆಲವೊಮ್ಮೆ ನನ್ನ ಬಗ್ಗೆ ನನಗೇ ನಂಬಿಕೆ ಮೂಡಲೊಲ್ಲದು. ಇಂಗ್ಲೆಂಡ್‌ನಿಂದ ನನ್ನ ವಿಮಾನ ಟೇಕ್‌ಆಫ್ ಆದ ಬಳಿಕ ನನ್ನ ನೈಜಯಾತ್ರೆ ಶುರುವಾಗುವುದು' ಎಂಬುದು ಜಾರಾ, ಕಾಟ್ರಿಜಕ್‌ನಲ್ಲಿ ವಿಮಾನ ಏರುವಾಗ ಹೇಳಿದ ಮಾತು.

ಜಾರಾಳ ಸೋಲೊ ಯಾನಕ್ಕೆ ಗುಡ್‌ಲಕ್ ಹೇಳಲು ಬಂದ ಗುಂಪಿನಲ್ಲಿ ಅವಳ ಅಮ್ಮ ಡೆ ಸ್ಮೆಟ್ ಸಹ ಇದ್ದರು. 'ಸಹಜವಾಗಿ ನನ್ನಲ್ಲಿ ಮಿಶ್ರ ಭಾವನೆಗಳಿವೆ. ನಾನು ಅವಳ ಅಮ್ಮ. ಈ ರೀತಿ ಅವಳು ಹೊರಡುವುದನ್ನು ನೋಡಿದಾಗ ನನ್ನ ಹೃದಯ ಬಡಿದುಕೊಳ್ಳುತ್ತದೆ. ಆದರೆ, ಅವಳ ಸಾಹಸ ನೋಡಿದಾಗ ಹೆಮ್ಮೆ ಎನಿಸುತ್ತದೆ. ಅವಳ ಈ ಯಾತ್ರೆ ಜಗತ್ತಿನ ನೂರಾರು ಹುಡುಗಿಯರಿಗೆ ಸ್ಫೂರ್ತಿ ತುಂಬುತ್ತದೆ' ಎಂದು ಅವರು ಹೇಳುವಾಗ, ಪುಟ್ಟ ವಿಮಾನ ಟೇಕ್ ಆಫ್ ಆಗಿ ಆಕಾಶದಲ್ಲಿ ಕಾಣೆಯಾಗಿತ್ತು.

ಎಲ್ಲವೂ ಅಂದುಕೊಂಡಂತೆ ನಡೆದರೆ ಜಾರಾ, ನವೆಂಬರ್ 4ರಂದು ಬೆಲ್ಜಿಯಂಗೆ ವಾಪಸು ಬರಲಿದ್ದಾಳೆ. ಆಗ ಅವಳ ಪಾದಗಳೇನೋ ತವರು ನೆಲದ ಸ್ಪರ್ಶ ಮಾಡಬಹುದು. ಆದರೆ, ಕಣ್ಣುಗಳು ಮಾತ್ರ ಗಗನದತ್ತಲೇ ನೆಟ್ಟಿರುತ್ತವೆ. ಏಕೆಂದರೆ, ಎಂಜಿನಿಯರಿಂಗ್ ಓದಿ, ಗಗನಯಾತ್ರಿ ಆಗಬೇಕೆಂಬ ಹಿರಿದಾಸೆ ಆ ಕಣ್ಣುಗಳಲ್ಲಿ ಈಗಾಗಲೇ ತುಂಬಿಬಿಟ್ಟಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65